# ಮತ್ತೆ ಮತ್ತೆ ಗಾಂಧಿ

**ಸ್ವಾತಂತ್ರ್ಯೋತ್ತರ** ಭಾರತದಲ್ಲಿ ಗಾಂಧೀಜಿಯಷ್ಟು ಆರಾಧನೆಗೆ ಹಾಗೂ ನಿಂದನೆಗೆ ಒಳಗಾದ ಮತ್ತೊಬ್ಬ ವ್ಯಕ್ತಿ ಇರಲಿಕ್ಕಿಲ್ಲ. ಇಡೀ ಜಗತ್ತು ಮಹಾತ್ಮನೆಂದು ಒಪ್ಪಿಕೊಂಡು, ಬೆರಗಿನಿಂದ ನೋಡುತ್ತಿದ್ದರೂ, ದೇಶದೊಳಗೆ ಗಾಂಧೀಜಿಯನ್ನು ಭಿನ್ನಮತದ ಪ್ರಶ್ನೆಗಳಿಗೆ ನಿರಂತರವಾಗಿ ಗುರಿಯಾಗಿಸಲಾಗುತ್ತಿದೆ. ಗಾಂಧೀಜಿಯ ಬದುಕು ಹಾಗೂ ಸಾಧನೆ ಕುರಿತಂತೆ ಪ್ರಶ್ನೆಗಳನ್ನು ಎತ್ತುವುದರ ಜೊತೆಗೆ, ಅವರನ್ನು ಪ್ರಜ್ಞಾಪೂರ್ವಕವಾಗಿ ತಪ್ಪುತಪ್ಪಾಗಿ ವ್ಯಾಖ್ಯಾನಿಸುವ ಸಾಮೂಹಿಕ ಪ್ರಯತ್ನಗಳೂ ನಡೆದಿವೆ. ಗಾಂಧೀಜಿಯನ್ನು ಪ್ರಶ್ನಿಸುವುದು, ಅವಮಾನಿಸುವುದು ಹಾಗೂ ನಿರಾಕರಿಸುವುದರಲ್ಲಿ ತಾತ್ವಿಕ ಸಾಧ್ಯತೆಗಳಿಗಿಂತಲೂ ಹೆಚ್ಚಾಗಿ ರಾಜಕೀಯ ಒಲವು ನಿಲುವುಗಳೇ ನಿರ್ಣಾಯಕವಾಗಿರುವಂತಿವೆ. ಗಾಂಧಿಗೆ ಎದುರಾಗುತ್ತಿರುವ ಈ ಬಹುದೊಡ್ಡ ವಿರೋಧದ ನಡುವೆ, ವರ್ತಮಾನದ ತವಕತಲ್ಲಣಗಳ ಹಿನ್ನೆಲೆಯಲ್ಲಿ ಗಾಂಧಿಯನ್ನು ಮತ್ತೆ ಮತ್ತೆ ಒರೆಗೆ ಹಚ್ಚಿ ಪರೀಕ್ಷಿಸುವ ಸೃಜನಶೀಲ ಪ್ರಯತ್ನಗಳೂ ನಡೆದಿವೆ. ಗಾಂಧೀಜಿ ಈ ದೇಶಕ್ಕೆ ಮಾತ್ರವಲ್ಲ, ವಿಶ್ವಕ್ಕೆ ಹೇಗೆ ಅಗತ್ಯ ಮತ್ತು ಅನಿವಾರ್ಯ ಎನ್ನುವುದನ್ನು ಮನದಟ್ಟು ಮಾಡಿಸುವ ಅಧ್ಯಯನಗಳೂ ನಡೆದಿವೆ.

ಚಾರಿತ್ರಿಕ ನಾಯಕನೊಬ್ಬನನ್ನು ತಪ್ಪು ಗ್ರಹಿಕೆಗಳಿಂದ ಮುಕ್ತಗೊಳಿಸುವ ಪ್ರಯತ್ನದ ವಿಶಿಷ್ಟ ಕೃತಿ ‘ಮಿನುಗು ನೋಟ’. ಎಮ್.ಜಿ. ಹೆಗಡೆ ಅವರ, ಪ್ರಶ್ನೋತ್ತರ ರೂಪದ ಈ ಕೃತಿ ಗಾತ್ರದಲ್ಲಿ ಪುಟ್ಟದಾಗಿದ್ದರೂ ಉದ್ದೇಶ ಹಾಗೂ ಸಾಧನೆಯಲ್ಲಿ ಮಹತ್ವದ್ದು. ‘ಗಾಂಧಿ ವಿಚಾರ ವೇದಿಕೆ’ಯ ಪರಿಕಲ್ಪನೆಯಾದ ಈ ಕೃತಿಗೆ ಪ್ರವೇಶಿಕೆ ರೂಪದಲ್ಲಿ ಅರವಿಂದ ಚೊಕ್ಕಾಡಿಯವರು ಬರೆದಿರುವ ದೀರ್ಘವಾದ ಪ್ರಸ್ತಾವನೆ, ಕೃತಿಯ ಉದ್ದೇಶದ ಜೊತೆಗೆ, ಗಾಂಧಿಯ ಅನನ್ಯತೆಯನ್ನೂ ಮನದಟ್ಟು ಮಾಡಿಕೊಡುವಂತಿದೆ.

‘ಗಾಂಧಿ ಪ್ರಶ್ನಾತೀತರೇನೂ ಅಲ್ಲ’ ಎನ್ನುವ ವಿನಯ ಹಾಗೂ ಮುಕ್ತ ಮನಸ್ಸಿನೊಂದಿಗೆ ಎಮ್.ಜಿ. ಹೆಗಡೆ ಈ ಕೃತಿ ರೂಪಿಸಿದ್ದಾರೆ. ಗಾಂಧೀಜಿ ಕುರಿತು ಇರಬಹುದಾದ ಪ್ರಶ್ನೆ-ಗೊಂದಲಗಳನ್ನು ಓದುಗರಿಂದ ಆಹ್ವಾನಿಸಿ, ಆ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಇಲ್ಲಿದೆ. ಈ ಕೃತಿ ಗಾಂಧೀಜಿಯ ವಕ್ತಾರಿಕೆಯನ್ನು ಮಾಡುವುದರ ಬದಲಾಗಿ, ಕಾಲ-ದೇಶದ ಹಿನ್ನೆಲೆಯಲ್ಲಿ ಗಾಂಧಿಯ ಬದುಕು ಮತ್ತು ವಿಚಾರಧಾರೆಯನ್ನು ಅರ್ಥೈಸುವ ಪ್ರಯತ್ನವಾಗಿದೆ. ತರ್ಕದ ಬದಲಾಗಿ, ಚಾರಿತ್ರಿಕ ಆಕರಗಳ ಮೂಲಕ ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿರುವುದು ಕೃತಿಯ ಮಹತ್ವವನ್ನು ಹೆಚ್ಚಿಸಿದೆ. ಪುಸ್ತಕದ ಕೊನೆಯಲ್ಲಿ, ಉತ್ತರಗಳನ್ನು ನೀಡಲು ಬಳಸಿಕೊಳ್ಳಲಾದ ಆಕರಕೃತಿಗಳನ್ನು ಹೆಸರಿಸಲಾಗಿದೆ.

ಹತ್ತೊಂಬತ್ತು ಅಧ್ಯಾಯಗಳಲ್ಲಿ ಗಾಂಧಿಯನ್ನು ಕುರಿತ ಪ್ರಶ್ನೆಗಳಿಗೆ ಉತ್ತರಿಸಲು ಎಮ್.ಜಿ. ಹೆಗಡೆ ಪ್ರಯತ್ನಿಸಿದ್ದಾರೆ. ಗಾಂಧೀಜಿ ಹಿಂದೂ ವಿರೋಧಿ, ದೇಶ ವಿಭಜನೆಗೆ ಮೂಲಪುರುಷರು, ನೆಹರೂ ಮೇಲಿನ ಪ್ರೇಮದಿಂದ ವಲ್ಲಭಭಾಯಿ ಪಟೇಲರಿಗೆ ದ್ರೋಹ ಮಾಡಿದರು, ಅವರ ಚಾರಿತ್ರ್ಯ ಮತ್ತು ನೈತಿಕತೆಯಲ್ಲಿನ ದ್ವಂದ್ವಗಳು - ಪದೇ ಪದೇ ಕೇಳಿಬರುವ ಇಂಥ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುವ ಪ್ರಯತ್ನ ಕೃತಿಯಲ್ಲಿದೆ. ಭಗತ್ ಸಿಂಗ್ ಗಲ್ಲು ಶಿಕ್ಷೆಗೆ ಸಂಬಂಧಿಸಿದಂತೆ ಗಾಂಧೀಜಿ ವಹಿಸಿದ ಪಾತ್ರ, ಯಂತ್ರಗಳ ಕುರಿತಂತೆ ಅವರ ನಂಬಿಕೆ, ಧರ್ಮದ ಬಗೆಗಿನ ನಿಲುವು - ಹೀಗೆ ಗಾಂಧಿಯನ್ನು ಕುರಿತ ಬಹುತೇಕ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸುವ ಪ್ರಯತ್ನ ಕುತೂಹಲಕರವಾಗಿದೆ. ಈ ಉತ್ತರಗಳು, ಗಾಂಧೀಜಿಯ ಕುರಿತ ಪ್ರಶ್ನೆಗಳಿಗೆ ಪ್ರತಿಕ್ರಿಯೆ ಆಗಿರುವುದರ ಜೊತೆಗೆ, ಕಾಲ-ದೇಶಗಳ ಚೌಕಟ್ಟಿನಿಂದ ಘಟನೆಗಳನ್ನು ಹೊರಗೆ ತೆಗೆದು ನೋಡಿದಾಗ ಉಂಟಾಗುವ ಅಪಾಯವನ್ನು ಮನವರಿಕೆ